E-mail:admnkfcsc123@yhoo.com

**ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮ ನಿಯಮಿತ**
**ನಂ.16/I, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ಬೆಂಗಳೂರು-560 052**
**Karnataka Food & Civil Supplies Corporation Ltd.**
(Government of Karnataka Undertaking)

ಸಂಖ್ಯೆ:ಕಆನಾಸನಿನಿ/ಆಡಳಿತ/ ನೇ.ದಾ.ಪ./88/2025-26/ 4050 ದಿನಾಂಕ:27.01.2026

## ಅಧಿಸೂಚನೆ – ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ

**ವಿಷಯ:** ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಜು ನಿಗಮ ನಿಯಮಿತದಲ್ಲಿ ಹಿರಿಯ ಸಹಾಯಕರ ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:**
1. ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿಆರ್15/2022-23(ಕೆಕೆ) ದಿನಾಂಕ.23.06.2023.
2. ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿಆರ್15/2022-23 (ಆರ್‌ಪಿಸಿ) ದಿನಾಂಕ.23.06.2023
3. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ದಿನಾಂಕ.20.06.2024 ರಂದು ಪ್ರಕಟಿಸಲಾದ ಹುದ್ದೆವಾರು ಅರ್ಹತಾ ಪಟ್ಟಿ.
4. ಅಧಿಸೂಚನೆ ಸಂಖ್ಯೆ: ಕಆನಾಸನಿನಿ/ಆಡಳಿತ/ನೇ.ನೇ/746/2025-26/1635, ದಿನಾಂಕ:17.11.2025.
5. ಅಧಿಸೂಚನೆ ಸಂಖ್ಯೆ: ಕಆನಾಸನಿನಿ/ಆಡಳಿತ/ನೇ.ದಾ.ಪ/88/2025-26, ದಿನಾಂಕ:16.01.2026.

**************

ಉಲ್ಲೇಖಿತ ಅಧಿಸೂಚನೆಗಳಿಗೆ ಅನುಗುಣವಾಗಿ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದಲ್ಲಿ 57 ಹಿರಿಯ ಸಹಾಯಕರ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ಅಕ್ಟೋಬರ್-2023 ಮತ್ತು ನವೆಂಬರ್-2023ರ ಮಾಹೆಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಡೆಸಲಾಗಿರುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿದ ತರುವಾಯ, ತಾತ್ಕಾಲಿಕ ಸರಿ ಉತ್ತರಗಳನ್ನು (ಕೀ ಉತ್ತರಗಳು) ದಿನಾಂಕ.04.12.2023ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಪ್ರಕಟಿಸಿ ಅಭ್ಯರ್ಥಿಗಳಿಂದ ಆಕ್ಷೇಪಣೆಗಳನ್ನು ಸ್ವೀಕರಿಸಿ, ಆಕ್ಷೇಪಿತ ಕೀ ಉತ್ತರಗಳನ್ನು ವಿಷಯ ತಜ್ಞರ ಸಮಿತಿಯ ಮೂಲಕ ಪರಿಶೀಲಿಸಿ ಅಂತಿಮ ಕೀ ಉತ್ತರಗಳನ್ನು ದಿನಾಂಕ.15.02.2024 ರಂದು ಪ್ರಕಟಿಸಲಾಗಿರುತ್ತದೆ. ನಂತರ ಅಭ್ಯರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ಅಂತಿಮ ಅಂಕ ಪಟ್ಟಿಯನ್ನು ಅಭ್ಯರ್ಥಿಗಳ/ ಹುದ್ದೆವಾರು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕೃತ ವೆಬ್ ಸೈಟ್‌ನಲ್ಲಿ ದಿನಾಂಕ.20.06.2024ರಂದು ಪ್ರಕಟಿಸಲಾಗಿರುತ್ತದೆ.

ದಾಖಲಾತಿಗಳ ಪರಿಶೀಲನೆಗಾಗಿ ಸೂಚಿತ ರಿಕ್ತ ಸ್ಥಾನಗಳ ಆಧಾರದ ಮೇಲೆ ಹುದ್ದೆವಾರು 1:3 ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ದಿನಾಂಕ.17.11.2025ರಂದು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ. ದಾಖಲಾತಿ ಪರಿಶೀಲನೆಯನ್ನು ದಿನಾಂಕ:27.11.2025, 19.12.2025 ಮತ್ತು 02.01.2026 ರಿಂದ 05.01.2026ರವರೆಗೆ ನಡೆಸಲಾಗಿರುತ್ತದೆ. 1:3 ಅರ್ಹತಾ ಪಟ್ಟಿಯ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆಯಲ್ಲಿ GM(Transgender) ಹಾಗೂ ST(Female) ಮೀಸಲಾತಿ ವರ್ಗಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದ ಕಾರಣ ದಿನಾಂಕ:23.01.2026ರಂದು ಅಂಕಗಳ ಜೇಷ್ಠತೆಯಲ್ಲಿ ನಂತರದ ಅರ್ಹ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ಕೈಗೊಂಡು ಹಿರಿಯ ಸಹಾಯಕರ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕಟ್-ಆಫ್ (Cut-off) ಅಂಕಗಳೊಂದಿಗೆ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ ವೆಬ್ ಸೈಟ್ https://kfcsc.karnataka.gov.in ದಲ್ಲಿ, ಈ ಮೂಲಕ ಪ್ರಕಟಿಸಲಾಗಿದೆ.

...2.

28/01/26.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸಮಂಜಸವಾದ ಆಕ್ಷೇಪಣೆಗಳಿದ್ದಲ್ಲಿ, ಸೂಕ್ತ ವಿವರ ಮತ್ತು ದಾಖಲಾತಿಗಳೊಂದಿಗೆ, ವಿಷಯಸೂಚಿಯಲ್ಲಿ **'ಹಿರಿಯ ಸಹಾಯಕರು-ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ'** ಎಂದು ಕಡ್ಡಾಯವಾಗಿ ನಮೂದಿಸಿ, ತಮ್ಮ ಹೆಸರು ಹಾಗೂ ಅರ್ಜಿ ಸಂಖ್ಯೆಯೊಂದಿಗೆ ಖುದ್ದಾಗಿ **ವ್ಯವಸ್ಥಾಪಕ ನಿರ್ದೇಶಕರು, ಕ.ಆ.ನಾ.ಸ.ನಿ.ನಿ., ನಂ 16/ಐ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು-560052** ಇವರಿಗೆ ಸಲ್ಲಿಸುವುದು. ಆಕ್ಷೇಪಣೆಗಳನ್ನು ದಿನಾಂಕ:03.02.2026 ಸಂಜೆ 05:30 ರೊಳಗಾಗಿ ಮಾತ್ರ ಸಲ್ಲಿಸಬಹುದಾಗಿರುತ್ತದೆ.

**ನಿಗದಿತ ದಿನಾಂಕದ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.**

ವ್ಯವಸ್ಥಾಪಕ ನಿರ್ದೇಶಕರು